ದಿ:-21/08/26 SL NO:- 30

# ಕರ್ನಾಟಕ ವಿಧಾನ ಪರಿಷತ್ತು

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಮಂಜುನಾಥ ಭಂಡಾರಿ ಇವರ ಶೂನ್ಯ ವೇಳೆಯ ಪ್ರಸ್ತಾವಕ್ಕೆ ಉತ್ತರಿಸುವ ಕುರಿತು.

*****

**ವಿಷಯ:**-ಸಾರ್ವಜನಿಕ ಮಹತ್ವದ ಜರೂರು ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಅನುಮತಿ ಕೋರಿ ಮನವಿ.

*****

**"ಪಾಳು ಬೀಳುವ ಸ್ಥಿತಿಯಲ್ಲಿ ದರ್ಬೆ ಸಮೀಪದ ಸಿಟಿಒ ಬಳಿ ನಿರ್ಮಾಣಗೊಂಡಿರುವ ಹೊಸ ಕಟ್ಟಡ", ಅಲ್ಪಸಂಖ್ಯಾತ ಸಮುದಾಯ ಭವನಕ್ಕಿಲ್ಲ ಉದ್ಘಾಟನೆ ಭಾಗ್ಯ?" ಎಂಬ ಶೀರ್ಷಿಕೆಯಡಿ ದಿನಾಂಕ:20-08-2026ರ ಹೊಸದಿಗಂತ ದಿನಪತ್ರಿಕೆಯಲ್ಲಿ ವರದಿಯಾಗಿರುತ್ತದೆ.**

ಅಲ್ಪಸಂಖ್ಯಾತ ಯುವಕ-ಯುವತಿಯರಿಗೆ ಉದ್ಯೋಗ ಹಾಗೂ ಇತರೆ ಮಾಹಿತಿ, ತರಬೇತಿಗಳನ್ನು ನೀಡಲೆಂದು ಹಿಂದಿನ ಸರಕಾರದ ಅವಧಿಯಲ್ಲಿ ನಿರ್ಮಾಣಗೊಂಡ ಸಮುದಾಯಭವನ ಕಟ್ಟಡವೊಂದು ಉದ್ಘಾಟನೆಗೊಳ್ಳದೆ, ಬಳಕೆಯಾಗದೇ ಪಾಳು ಬೀಳುವ ಸ್ಥಿತಿಯಲ್ಲಿದೆ.

ಯುವ ಸಮುದಾಯದ ಸಬಲೀಕರಣದ ಒಳ್ಳೆಯ ಉದ್ದೇಶದಿಂದ ದರ್ಬೆ ಸಮೀಪದ ಸಿಟಿಒ ಬಳಿ ನಿರ್ಮಾಣಗೊಂಡಿರುವ ಈ ಕಟ್ಟಡದ ಕಾಮಗಾರಿ ಮುಗಿದು ಮೂರು ವರ್ಷ ಕಳೆದರೂ ಉದ್ಘಾಟನೆಗೊಂಡಿಲ್ಲ. ಪರಿಣಾಮ ಉದ್ದೇಶಿತ ಯೋಜನೆಗಳಿಗೆ ಈ ಕಟ್ಟಡವನ್ನು ಬಳಸಲು ಸಾಧ್ಯವಾಗದಂತೆ ಮಾಡಲಾಗಿದೆ.

ಪುತ್ತೂರಿನ ಹೃದಯ ಭಾಗದಲ್ಲಿ ಸಿಡಿಪಿಒ, ಜಿ.ಪಂ. ಇಂಜಿನಿಯರಿಂಗ್ ಇಲಾಖೆ, ತೆರಿಗೆ ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಮೊದಲಾದ ಕಚೇರಿಗಳು ಈ ಪರಿಸರದಲ್ಲಿವೆ. ಈಗ ಹೊಸದಾಗಿ ನಿರ್ಮಾಣವಾಗಿರುವ ಈ ಕಟ್ಟಡ ಅಲ್ಪಸಂಖ್ಯಾತ ಸಮುದಾಯಗಳ ಯುವಕ-ಯುವತಿಯರಿಗೆ ಕೌಶಲ್ಯಾಭಿವೃದ್ಧಿ, ತರಬೇತಿ, ಉದ್ಯೋಗ ಮಾಹಿತಿ ಮೊದಲಾದ ವಿಚಾರಗಳನ್ನು ನೀಡುವ ಸಮುದಾಯ ಭವನವಾಗಿದೆ.

2022-23ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ನಿಗಮದಿಂದ 1.40 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಈ ಕಟ್ಟಡ ನಿರ್ಮಿಸಲಾಗಿದೆ. ಇದರಲ್ಲಿ ಕೇಂದ್ರ ಸರ್ಕಾರದಿಂದ ಶೇ 75 ಹಾಗೂ ರಾಜ್ಯ ಸರ್ಕಾರದಿಂದ ಶೇ 25 ಅನುಪಾತದಲ್ಲಿ ಈ ಕಟ್ಟಡ ನಿರ್ಮಾಣವಾಗಿದೆ.

ಸಮುದಾಯಗಳ ಆವಶ್ಯಕತೆಯನ್ನು ಮನಗಂಡು ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ನಿರ್ಮಾಣಗೊಂಡಿರುವ ಕಟ್ಟಡವನ್ನು ಪಾಳು ಬೀಳುವ ಸ್ಥಿತಿಗೆ ಕೊಂಡೊಯ್ಯುತ್ತಿರುವುದು ನಿಜಕ್ಕೂ ವಿಪರ್ಯಾಸ. ತಕ್ಷಣವೇ ಈ ಬಗ್ಗೆ ಸರಕಾರ ಮತ್ತು ಅಧಿಕಾರಿಗಳು ಗಮನ ಹರಿಸಬೇಕಿದೆ ಎಂಬುದು ಸಾರ್ವಜನಿಕರ ವಲಯ ಹಾಗೂ ಅಲ್ಪಸಂಖ್ಯಾತ ಸಮುದಾಯದ ಪ್ರಮುಖರ ಬೇಡಿಕೆಯಾಗಿದೆ.

ಅಲ್ಪಸಂಖ್ಯಾತರ ಹಿತದೃಷ್ಟಿಯಿಂದ ಸಮುದಾಯಭವನ ಉದ್ಘಾಟನೆಗೆ ಬೇಕಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳಬೇಕಾಗಿ ಮಾನ್ಯ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮಂತ್ರಿಗಳನ್ನು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

....2

**ಉತ್ತರ:-**

ದಕ್ಷಿಣ ಕನ್ನಡ ಜಿಲ್ಲೆಯ ದರ್ಬೆ ಸಮೀಪದ ಸಿಟಿ ಬಳಿ ನಿರ್ಮಾಣಗೊಂಡ ಅಲ್ಪಸಂಖ್ಯಾತ ಸಮುದಾಯಭವನವು ಪಾಳು ಬೀಳುವ ಸ್ಥಿತಿಯಲ್ಲಿರುವುದಾಗಿ ತಿಳಿಸಿರುವ ಕಟ್ಟಡವು ಸಮುದಾಯಭವನ ಕಟ್ಟಡವಾಗಿರುವುದಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನಲ್ಲಿ ಸಾಮಾನ್ಯ ಸೇವಾ ಕೇಂದ್ರ ಕಟ್ಟಡ ನಿರ್ಮಾಣ ಮಾಡಲು ಪ್ರಧಾನಮಂತ್ರಿ ಜನವಿಕಾಸ ಯೋಜನೆಯಡಿ(PMJVK) 2019-20ನೇ ಸಾಲಿನಲ್ಲಿ ಮಂಜೂರು ಮಾಡಲಾಗಿರುವ ಸದರಿ ಕಟ್ಟಡವನ್ನು 2023-24ನೇ ಸಾಲಿನಲ್ಲಿ ರೂ.1.40 ಕೋಟಿ ಮೊತ್ತದಲ್ಲಿ ನಿರ್ಮಾಣ ಮಾಡಲಾಗಿರುತ್ತದೆ. ಸದರಿ ಕಟ್ಟಡವು ಪಾಳು ಬಿದ್ದಿರುವುದಿಲ್ಲ, ಸುಸ್ಥಿತಿಯಲ್ಲಿರುತ್ತದೆ.

ಪ್ರಸ್ತುತ ಸದರಿ ಸಾಮಾನ್ಯ ಸೇವಾ ಕೇಂದ್ರವನ್ನು ತಾಲ್ಲೂಕು ವಿಸ್ತರಣಾಧಿಕಾರಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರ ಕಛೇರಿ, ಅಲ್ಪ ಸಂಖ್ಯಾತರ ಮಾಹಿತಿ ಕೇಂದ್ರ ಪುತ್ತೂರು ಹಾಗೂ ಗ್ರಂಥಾಲಯದ ಉದ್ದೇಶಕ್ಕೆ ಬಳಕೆ ಮಾಡಲಾಗುವುದು. ಮುಂದುವರೆದು ಮಾನ್ಯ ಶಾಸಕರು,ಆಶೋಕ್ ಕುಮಾರ್ ರೈ ಕೆ.ಎಸ್ ರವರು ಹೊಸ ವಿದ್ಯಾರ್ಥಿನಿಲಯ ಪುತ್ತೂರು ತಾಲ್ಲೂಕಿಗೆ ಮಂಜೂರು ಮಾಡುವಂತೆ ಕೋರಿ ಬೇಡಿಕೆ ಸಲ್ಲಿಸಿದ್ದು, ಅದರಂತೆ ಹೊಸದಾಗಿ ಬಾಲಕರ ವಸತಿ ನಿಲಯ ಮಂಜೂರಾದ ಕೂಡಲೇ ಸದರಿ ಕಟ್ಟಡವನ್ನು ವಸತಿ ನಿಲಯವನ್ನಾಗಿ ಬಳಸಿಕೊಳ್ಳಲು ಕ್ರಮವಹಿಸಲಾಗುವುದು.

**ಕಡತ ಸಂಖ್ಯೆ: MWD-LMQ/144/2026**

**(ಜಮೀರ್ ಅಹಮದ್ ಖಾನ್)** — see note

ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್
ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ
ಸಚಿವರು